**ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ**
**ಸಂಚಾರಿ ನ್ಯಾಯಾಲಯ, ಅಜ್ಜಂಪುರ**

**ಸಿ.ಸಿ.ನಂಃ 149/2018**

**ಫಿರ್ಯಾದುದಾರರುಃ** ಸರ್ಕಾರದ ಪರವಾಗಿ ಅಜ್ಜಂಪುರ ಪೊಲೀಸರು

-: **ವಿರುದ್ಧ** :-

**ಆರೋಪಿಃ**

1. ಶ್ರೀ ದೇವರಾಜ,
ಬಿನ್ ಶ್ರೀ ಮಾಂತೇಶಪ್ಪ,
30 ವರ್ಷಗಳು,
ವಾಸಃ ಗುಬ್ಬಿಹಳ್ಳಿ ಗ್ರಾಮ,
ಕಡೂರು ತಾಲ್ಲೂಕು.

2. ಶ್ರೀ ಯೋಗೀಶ,
ಬಿನ್ ಶ್ರೀ ರಂಗನಾಥ,
34 ವರ್ಷ,
ವಾಸಃ ಸೊಲ್ಲಾಪುರ ಗ್ರಾಮ,
ತರೀಕೆರೆ ತಾಲ್ಲೂಕು.

3. ಶ್ರೀ ನಟರಾಜ,
ಬಿನ್ ಶ್ರೀ ಗುರುಸಿದ್ದಪ್ಪ,
35 ವರ್ಷ,
ವಾಸಃ ಸೊಲ್ಲಾಪುರ ಗ್ರಾಮ,
ತರೀಕೆರೆ ತಾಲ್ಲೂಕು

4. ಶ್ರೀ ಗಿರೀಶ,
(ಮರಣ ಹೊಂದಿರುತ್ತಾರೆ)

**ದೋಷಾರೋಪಣೆ**

ಶ್ರೀ. ರಾಹುಲ್ ಶೆಟ್ಟಿಗಾರ್, ಬಿ.ಕಾಂ.(Hons.), ಎಲ್‌ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ತರೀಕೆರೆ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 14.10.2016 ರಂದು ರಾತ್ರಿ 9.00 ಗಂಟೆಗೆ ಅಜ್ಜಂಪುರ ಪೋಲೀಸ್ ಠಾಣಾ ಸರಹದ್ದಿನ ತಮ್ಮಟದಹಳ್ಳಿ ಗೇಟ್‌ನಲ್ಲಿರುವ ಚಾಣಕ್ಯ ಬಾರ್ ಗೆ ಹೋಗಿ ಚಾಸಾ-1/ ಶ್ರೀ ಸಿದ್ದರಾಮಪ್ಪನವರು 2 ಕ್ವಾಟರ್ ಬ್ಯಾಕ್‌ಪೈಪರ್ ಬ್ರಾಂಡಿ ಮದ್ಯವನ್ನು ತೆಗೆದುಕೊಂಡು ಅಲ್ಲಿಯೇ ಮುಂಭಾಗದಲ್ಲಿ ಚಾಸಾ-10/ ಶ್ರೀ ಪ್ರವೀಣ ರವರೊಂದಿಗೆ ಮದ್ಯವನ್ನು ಕುಡಿದು ರಾತ್ರಿ ಸುಮಾರು 10.00 ಗಂಟೆಗೆ ವಾಪಸ್ಸು ಸೊಲ್ಲಾಪುರಕ್ಕೆ ಹೋಗಲು ನಡೆದುಕೊಂಡು ಬಂದಿದ್ದು, ಮದ್ಯ ಕುಡಿದ

ಅಮಲಿನಲ್ಲಿ ಸೊಲ್ಲಾಪುರಕ್ಕೆ ಹೋಗದೆ ತಮ್ಮಟದಹಳ್ಳಿ ಗೇಟ್ ಕಡೆಯಿಂದ ಮುಗಳಿ ಗ್ರಾಮದ ಕಡೆಗೆ ನಡೆದುಕೊಂಡು ಹೋಗುತ್ತಿರುವಾಗ 1 ರಿಂದ 3 ನೇ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಸೊಲ್ಲಾಪುರ ಗ್ರಾಮದ ಸರ್ವೇ ನಂಬರ್ 20/3ರಲ್ಲಿನ ಜಮೀನಿನ ವಿಚಾರದಲ್ಲಿ ಈ ಹಿಂದೆ ಚಾಸಾ-1 ಮತ್ತು ಅವರ ಅಣ್ಣತಮ್ಮಂದಿರುಗಳೊಂದಿಗೆ ಆದ ಗಲಾಟೆಗಳ ಹಿನ್ನಲೆಯಲ್ಲಿ ದ್ವೇಷದಿಂದ ಚಾಸಾ-1 ರವರನ್ನು ತಮ್ಮಟದಹಳ್ಳಿ-ಮುಗಳಿ ಗ್ರಾಮದ ಮಧ್ಯ ಟಾರು ರಸ್ತೆಯ ಪೂರ್ವ ದಿಕ್ಕಿಗೆ ಇರುವ ಬಂಡಿ ದಾರಿಯೊಳಗೆ ಎಳೆದುಕೊಂಡು ಹೋಗಿ ಸೂಳೆಮಗನೇ ನೀನು ನಿಮ್ಮ ಅಣ್ಣ-ತಮ್ಮಂದಿರುಗಳು ಜಮೀನಿನ ವಿಚಾರದಲ್ಲಿ ನಮ್ಮ ಮೇಲೆ ಪೋಲೀಸ್ ಕೇಸು ಮಾಡಿಸುತ್ತೀರಾ ಎಂದು ಚಾಸಾ-1 ರವರ ಶಾಂತಿಭಂಗ ಮಾಡುವ ಉದ್ದೇಶದಿಂದ ಅವಾಚ್ಯ ಶಬ್ದಗಳಿಂದ ಬೈದು ಅವಮಾನಿಸಿರುತ್ತೀರಿ. ಈ ರೀತ್ಯ 1 ರಿಂದ 3 ನೇ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 3 ನೇ ಆರೋಪಿಗಳಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶವನ್ನು ಮುಂದುವರಿಸಿ, ನಿಮ್ಮಲ್ಲಿ 1 ಮತ್ತು 2 ನೇ ಆರೋಪಿ ದೊಣ್ಣೆಯಿಂದ ಚಾಸಾ-1 ರವರ ಕಾಲಿಗೆ ಹಾಗೂ ನಿಮ್ಮಲ್ಲಿ 3 ನೇ ಆರೋಪಿ ಕಬ್ಬಿಣದ ರಾಡಿನಿಂದ ಚಾಸಾ-1 ರವರ ಸೊಂಟಕ್ಕೆ ಹೊಡೆದಿರುತ್ತೀರಿ ಮತ್ತು ಅವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯ 1 ರಿಂದ 3 ನೇ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 4 ನೇ ಆರೋಪಿಗಳಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶವನ್ನು ಮುಂದುವರಿಸಿ, ನಿಮ್ಮಲ್ಲಿ ಮೃತ 4 ನೇ ಆರೋಪಿ ಕಲ್ಲಿನಿಂದ ಚಾಸಾ-1 ರವರ ಮುಖಕ್ಕೆ ಗಲ್ಲಕ್ಕೆ ಹೊಡೆದು ಮೇಲಿನ ಎರಡು ಹಲ್ಲುಗಳನ್ನು ಬೀಳಿಸಿರುತ್ತಾರೆ ಮತ್ತು ಅವರಿಗೆ ತೀವ್ರ ಸ್ವರೂಪದ ನೋವುಂಟು ಮಾಡಿರುತ್ತಾರೆ. ಈ ರೀತ್ಯ 1 ರಿಂದ 3 ನೇ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 326 ಸಹವಾಚಕ ಕಲಂ 34 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 3 ನೇ ಆರೋಪಿಗಳಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶವನ್ನು ಮುಂದುವರಿಸಿ, 1 ರಿಂದ

3 ನೇ ಆರೋಪಿಗಳಾದ ನೀವು ಚಾಸಾ-1 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತೀರಿ. ಈ ರೀತ್ಯ 1 ರಿಂದ 3 ನೇ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರಂತೆ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಸದರಿ ಮೇಲ್ಕಂಡ 1 ರಿಂದ 3 ನೇ ಆರೋಪಿಗಳಾದ ನೀವು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮೇಲೆ ಹೇಳಿದ ಅಪರಾದಗಳನ್ನು ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆ ಆಗತಕ್ಕದ್ದೆಂದು ಆದೇಶಿಸಲಾಗಿದೆ.

ಪ್ರಃ1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದಿರಾ? ಅವುಗಳು ನಿಮಗೆ ಅರ್ಥವಾಯಿತೇ?

ಆರೋಪಿಗಳ ಉತ್ತರಃ

ಆರೋಪಿ 1: Yes

ಆರೋಪಿ 2: Yes

ಆರೋಪಿ 3: Yes

ಪ್ರಃ2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಗಳ ಉತ್ತರಃ

ಆರೋಪಿ 1: Pleaded not guilty and claimed to be tried

ಆರೋಪಿ 2: Pleaded not guilty and claimed to be tried

ಆರೋಪಿ 3: Pleaded not guilty and claimed to be tried

(ಆರೋಪಿತರಿಗೆ ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

ದಿನಾಂಕ : 22.08.2025

ಸಹಿ/-

(ರಾಹುಲ್ ಶೆಟ್ಟಿಗಾರ್)

ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ

ಪ್ರ.ದ.ನ್ಯಾದಂ., ತರೀಕೆರೆ.

(ಸಂಚಾರಿ ನ್ಯಾಯಾಲಯ, ಅಜ್ಜಂಪುರ)

ಆರೋಪಿತರ ಸಹಿಃ